ನೀಡಲಾಗುವುದು ಎಂದು ಹೇಳಿಬಿಟ್ಟರೆ ಹೇಗೆ? ನಾವು ಗಂಭೀರವಾದ ವಿಚಾರವನ್ನು ಶೂನ್ಯವೇಳೆಯಲ್ಲಿ ಪ್ರಸ್ತಾಪ ಮಾಡುವುದಕ್ಕೆ ಅರ್ಥವುಂಟೇ? ನಾನು ಸರ್ಕಾರದ ಗಮನಕ್ಕೆ ತರುತ್ತೇನೆ, ಸರ್ಕಾರ ಏನಾದರೂ ಉತ್ತರ ಕೊಡಲಿ. ಏಕೆಂದರೆ ಅವರ ಅವಧಿ ಕಡಿಮೆಯಿರುವುದರಿಂದ ಅವರು ಯಾವಾಗ ಬೇಕಾದರೂ ಉತ್ತರ ಕೊಡಲಿ. ತಮ್ಮ ಮುಖಾಂತರ ನಾನು ಸರ್ಕಾರದ ಗಮನಕ್ಕೆ ವಿಚಾರವನ್ನು ತರುತ್ತಿದ್ದೇನೆ.

ಶ್ರೀ ಸಿ. ಬೈರೇಗೌಡ :— ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಸದಸ್ಯರು ಸದನದ ನಿಯಮಗಳನ್ನು ಸರಿಯಾಗಿ ಓದಿಕೊಂಡು ಬರಬೇಕೆಂದು ತಮ್ಮ ಮೂಲಕ ಪ್ರಾರ್ಥನೆ ಮಾಡುತ್ತೇನೆ. ಶೂನ್ಯವೇಳೆ ಇರತಕ್ಕದ್ದು ಏನೆಂದರೆ, ವಿಷಯವನ್ನು ಸರ್ಕಾರದ ಗಮನಕ್ಕೆ ತರಬೇಕು ಅಷ್ಟೆ, ಇದರ ಬಗ್ಗೆ ಚರ್ಚೆಯಾಗಲೀ ಇದರ ಬಗ್ಗೆ ಇಂತಹದ್ದೆ ಕ್ರಮ ತೆಗೆದುಕೊಳ್ಳುತ್ತೇವೆ ಹೀಗೆ ಮಾಡುತ್ತೇವೆಂದು ಹೇಳುವುದು ನಮ್ಮ ನಿಯಮಾವಳಿಯಲ್ಲಿ ಇಲ್ಲ. ಸರ್ಕಾರದ ಗಮನಕ್ಕೆ ಇಂತಹ ವಿಚಾರವನ್ನು ತರುತ್ತಿದ್ದೇವೆಂದು ಅವರು ಹೇಳಿದ ತಕ್ಷಣ ನಾವು ಗಮನಿಸಿದ್ದೇವೆಂದು ಸರ್ಕಾರ ಹೇಳಬೇಕು. ಅಷ್ಟಕ್ಕೆ ನಿಯಮಾವಳಿಯಲ್ಲಿ ಅವಕಾಶ ಇರತಕ್ಕದ್ದು. ಈ ನಿಯಮಾವಳಿಯಲ್ಲಿ ಇದನ್ನು ಮತ್ತೊಂದು ರೂಪದಲ್ಲಿ ಪ್ರಸ್ತಾಪ ಮಾಡುವುದಕ್ಕೆ ಪರಿವರ್ತನೆ ಮಾಡುವುದಕ್ಕೆ ಅವಕಾಶವಿಲ್ಲ.

ಶ್ರೀ ಸಿ.ಆರ್. ಸಗೀರ್ ಅಹ್ಮದ್ :— ಅಂದರೆ ಸರ್ಕಾರ ಎಷ್ಟು ಸಾರಿ ಸುಳ್ಳು ಹೇಳುತ್ತದೆಂದು ನಾವು ತಿಳಿದುಕೊಳ್ಳಬೇಕು.

ಶ್ರೀ ಸಿ. ಬೈರೇಗೌಡ :— ಸರ್ಕಾರ ಒಂದೂ ಸಾರಿಯೂ ಕೂಡ ಸುಳ್ಳು ಹೇಳುವುದಕ್ಕಾಗುವುದಿಲ್ಲ. ಸರ್ಕಾರ ಸುಳ್ಳು ಹೇಳುವುದಿಲ್ಲ.

ಶ್ರೀ ಸಿ.ಆರ್. ಸಗೀರ್ ಅಹ್ಮದ್ :— ಸುಳ್ಳು ಹೇಳಿದೆಯೆಂದು ನಾನು ಸಾಬೀತುಪಡಿಸುತ್ತೇನೆ.

ಶ್ರೀ ಸಿ. ಬೈರೇಗೌಡ :— ಸರ್ಕಾರ ಸುಳ್ಳು ಹೇಳಿದ್ದರೆ ನಿಯಮಾವಳಿಗಳಲ್ಲಿ ಬೇರೆ ಅವಕಾಶಗಳು ಇವೆ ಸದಸ್ಯರು ಅದನ್ನು ಉಪಯೋಗಿಸಿಕೊಳ್ಳಲಿ.

ಭದ್ರಾ ಅರಣ್ಯ ಯೋಜನೆಯಲ್ಲಿ 736 ಕುಟುಂಬಗಳನ್ನು ಸ್ಥಳಾಂತರಿಸುವ ಬಗ್ಗೆ

ಶ್ರೀ ಸಿ.ಆರ್. ಸಗೀರ್ ಅಹ್ಮದ್ :— ಮಾನ್ಯ ಉಪಾಧ್ಯಕ್ಷರೆ, ನನ್ನ ಕ್ಷೇತ್ರದ ವ್ಯಾಪ್ತಿಯಲ್ಲಿ ಅರಣ್ಯ ಇಲಾಖೆಗೆ ಸೇರಿರುವಂತಹ ಭದ್ರ ಅರಣ್ಯ ಯೋಜನೆಯಡಿ ಒಂದು ಯೋಜನೆ ಇದೆ. ನನ್ನ ಗೆಳೆಯ ಉಸ್ತುವಾರಿ ಸಚಿವರು ಇಲ್ಲಿ ಕುಳಿತಿದ್ದಾರೆ. ನಾಲ್ಕೈದು ಸಾರಿ ಈ ಸದನದಲ್ಲಿ ನಾನು ಸತತವಾಗಿ ಈ ಪ್ರಶ್ನೆ ಹಾಕುತ್ತಿದ್ದೇನೆ. 16 ಹಳ್ಳಿ ಸೇರಿರುವಂತಹ ಈ ಅಭಯಾರಣ್ಯದಲ್ಲಿ 736 ಕುಟುಂಬಗಳನ್ನು ಸ್ಥಳಾಂತರಿಸುವ ಬಗ್ಗೆ ಪ್ರಸ್ತಾವನೆಯನ್ನು ಜಿಲ್ಲಾಧಿಕಾರಿಗಳ ಮುಖಾಂತರವಾಗಿ ಸರ್ಕಾರಕ್ಕೆ ಕಳುಹಿಸಿದರೂ ಸಹ ಇದುವರೆಗೆ ಆ ಯೋಜನೆಯಡಿ ಯಾವುದೇ ತೀರ್ಮಾನವಾಗಿರುವುದಿಲ್ಲ. ಕೇಂದ್ರ ಸರ್ಕಾರಕ್ಕೆ 1992ನೇ ಇಸವಿಯಲ್ಲಿ ಪ್ರಸ್ತಾವನೆಯನ್ನು ಸಲ್ಲಿಸಿದ್ದೇವೆ. ಸರ್ಕಾರ ಅದಕ್ಕೆ ಉತ್ತರ ಕೊಡುತ್ತದೆ, ಏನು ಉತ್ತರ

ಕೊಡುತ್ತದೆಂದರೆ, ಹನ್ನೆರಡೂವರೆ ಕೋಟಿ ರೂಪಾಯಿಯೋಜನೆ ಆದರಲ್ಲಿ ಕೇಂದ್ರ ಸರ್ಕಾರ 7 ಕೋಟಿ ರೂಪಾಯಿ ಬಿಡುಗಡೆ ಮಾಡಿ ಕೊಟ್ಟಿದೆಯೆಂದು ಹೇಳುತ್ತಾರೆ. ರೆವಿನ್ಯೂ ಖಾತೆಯಲ್ಲಿ ಕೇವಣಿಯಾಗಿ ಹಣ ಇಡಲಾಗಿದೆಯೆಂದು ಹೇಳುತ್ತಾರೆ. ರಾಜ್ಯ ಸರ್ಕಾರದಿಂದ ನೀಡಬೇಕಾಗಿರುವಂತಹ 8 ಕೋಟಿ ರೂಪಾಯಿಗಳಿಗೆ ಬಜೆಟ್‌ನಲ್ಲಿ ಯಾವುದೇ ತರಹ ಚಕಾರ ಎತ್ತಲಿಲ್ಲ. ಅಲ್ಲಿ ವಾಸಿಸುತ್ತಿರುವ 736 ಕುಟುಂಬಗಳಿಗೆ ನಾಗರೀಕ ಸವಲತ್ತುಗಳು ಇಲ್ಲ. ಆವರ ಆರೋಗ್ಯ ಕೆಟ್ಟು ಹೋದರೆ ಹೆಣ ಹೊತ್ತುಕೊಂಡು ಬರುವಹಾಗೆ ಆ ರೋಗಿಯನ್ನು ಎತ್ತುಕೊಂಡು ಬರುವಂತಹ ಸ್ಥಿತಿಯಿದೆ. ಆ ದೃಷ್ಟಿಯಿಂದ ಕಳೆದ ನಾಲ್ಕು ವರ್ಷಗಳಿಂದ ಒಂದೇ ರೀತಿಯ ಉತ್ತರ ನೀಡುತ್ತಿರುವಂತಹ ಈ ಸರ್ಕಾರಕ್ಕೆ ತಮ್ಮ ಮುಖಾಂತರ ಸರ್ಕಾರದ ಗಮನಕ್ಕೆ ತರುತ್ತಿರುವುದೇನೆಂದರೆ ಯಾವ ಕಾಲಕ್ಕೆ ಈ ತೀರ್ಮಾನ ತೆಗೆದುಕೊಳ್ಳುತ್ತೀರಿ ಎನ್ನುವ ಬಗ್ಗೆ ಉತ್ತರವನ್ನು ಅವರಿಂದ ನಿರೀಕ್ಷೆ ಮಾಡುತ್ತೇನೆ.

ಶ್ರೀ ಸಿ. ಬೈರೇಗೌಡ :– ಮಾನ್ಯ ಉಪಾಧ್ಯಕ್ಷರೆ, ಮಾನ್ಯಸದಸ್ಯರು ಎತ್ತಿರತಕ್ಕ ವಿಚಾರವನ್ನು ಸರ್ಕಾರ ಗಮನಿಸಿದೆ.

(ಬಿ) 1998-99ನೇ ಸಾಲಿನಲ್ಲಿ ಡ್ರಿಪ್ ಇರಿಗೇಷನ್‌ಗಾಗಿ ಬಿಡುಗಡೆ ಮಾಡಿರುವ ಹಣ.

+ಶ್ರೀ ಬಿ. ಶಿವರಾಂ :– ಮಾನ್ಯ ಉಪಾಧ್ಯಕ್ಷರೆ, 1998-99ನೇ ಸಾಲಿಗೆ ಕೇಂದ್ರ ಸರ್ಕಾರ ಡ್ರಿಪ್ ಇರಿಗೇಷನ್ 26 ಕೋಟಿ 55ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಿದೆ. ಆ ಹಣವನ್ನು ಒಟ್ಟು 20 ಜಿಲ್ಲೆಗಳಿಗೆ ಹಂಚಿತಕ್ಕ ವ್ಯವಸ್ಥೆಯನ್ನು ಮಾಡಿದ್ದಾರೆ. ಆದರೆ ಹಂಚಿತಕ್ಕ ವಿಚಾರದಲ್ಲಿ ತಾರತಮ್ಯವಾಗಿದೆ ಎನ್ನತಕ್ಕ ವಿಚಾರವನ್ನು ತಮ್ಮ ಮೂಲಕ ಸರ್ಕಾರದ ಗಮನಕ್ಕೆ ತರುವುದು ನನ್ನ ಮೂಲಭೂತವಾದ ಪ್ರಶ್ನೆ. ಇವತ್ತು ಕೋಲಾರ ಮತ್ತು ಹಾಸನ ಜಿಲ್ಲೆಗಳಿಗೆ ಕೊಟ್ಟಿರತಕ್ಕದ್ದು ನೋಡಿದರೆ ಈ ಪ್ರಮಾಣದಲ್ಲಿ ಹಣ ಬಿಡುಗಡೆಯಾಗಿರತಕ್ಕದ್ದು ಇಪ್ಪತ್ತಾರೂವರೆ ಕೋಟಿಯಲ್ಲಿ ಕನಿಷ್ಟ ಸರಾಸರಿ ಒಂದೂಕಾಲು ಕೋಟಿ ಒಂದೊಂದು ಜಿಲ್ಲೆಗೆ ಬರಬೇಕಾದರೆ ನಮ್ಮ ಜಿಲ್ಲೆ ಹಾಸನಕ್ಕೆ ಬಂದಿರತಕ್ಕದ್ದು 75 ಲಕ್ಷ. ಕೋಲಾರ ಜಿಲ್ಲೆಗೆ ಬಂದಿರತಕ್ಕದ್ದು 52 ಲಕ್ಷ. ಈ ರೀತಿಯ ಒಂದು ವ್ಯತ್ಯಾಸ ಸರ್ಕಾರದ ಆದೇಶದಿಂದ ಆಗಿದೆ ನಾನು ಮೂಲಭೂತವಾಗಿ ಇದು ಒಂದೇ ಒಂದು ವಿಚಾರದಲ್ಲಿ ಸರ್ಕಾರದ ಗಮನ ಸೆಳೆಯುತ್ತಿದ್ದೇನೆ ಡ್ರಿಪ್ ಇರಿಗೇಷನ್ ಯೋಜನೆಯಲ್ಲಿ ಸರ್ಕಾರ ಒಂದು ಪ್ರಕಟಣೆ ಮಾಡಿತ್ತು sky is the limit ಅಂತ. ಆದರೆ ಈಗ ಏನಾಗಿದೆ ರೈತರು ಈ ಸಾಲಿನಲ್ಲಿ ಮೊದಲು ಇವರು ಏನೊಂದು ಗುರಿಯನ್ನು ಕೊಟ್ಟಿದ್ದರು ಅದನ್ನು ಅನುಸರಿಸಿ ಈಗಾಗಲೇ ಡ್ರಿಪ್ ಇರಿಗೇಷನ್ ಯೋಜನೆಗಳನ್ನು ಸಣ್ಣ ಮತ್ತು ಅತಿಸಣ್ಣ ರೈತರು ಈಗಾಗಲೇ ಮಾಡಿಕೊಂಡಿದ್ದಾರೆ. ಮಾಡಿಕೊಂಡಿರತಕ್ಕ ಫಲಾನುಭವಿಗಳ ಪಟ್ಟಿಯನ್ನೂ ಕೂಡ ಹಾಸನ ಜಿಲ್ಲೆಯದು ಪೂರ್ಣವಾಗಿ ಇಲಾಖೆಯ ನಿರ್ದೇಶಕರಿಗೆ ಬಂದಿದೆ. ಹಣ ಬಿಡುಗಡೆಯಾಗಿರತಕ್ಕದ್ದು ಅದಕ್ಕೆ ತಕ್ಕಂತೆ ಇಲ್ಲ. ಈಗ ರೈತನ ಪರಿಸ್ಥಿತಿ ಏನಾಗಬೇಕು? ವಿಶೇಷವಾಗಿ ಏನಾಗಿದೆ 90 ಪರ್ಸೆಂಟ್ ಮಹಿಳೆಯರಿಗೆ ಸಹಾಯಧನ. 70 ಪರ್ಸೆಂಟ್